1.	Range Forest Officer	...	1
2.	Special Deputy Range Forest Offier	...	1
3.	Foresters	...	4
4.	Forest Guards	...	4
5.	Driver	...	1

(c) Yes.

Representation By Members.

Distribution of wrong question Paper to Candidates Karnataka Univer.ity.

ಶ್ರೀ ಎಂ. ಗಂಗಣ್ಣ.—ಅಧ್ಯಕ್ಷರೆ, ನೆನ್ನೆಯ ದಿವಸದ ಕನ್ನಡ ಪ್ರಭ ಪತ್ರಿಕೆಯಲ್ಲಿ ವಿಶ್ವವಿದ್ಯಾ ನಿಲಯಗಳ ಪರೀಕ್ಷೆಯ ಬಗ್ಗೆ ಒಂದು ವಿವರಣೆ ಬಂದಿದೆ. ಅದು ಈ ರೀತಿ ಇದೆ.

''ಪರೀಕ್ಷೆ:—ಕಲಬುರ್ಗಿಯ ಗೊಂದಲಪುರ''

ಅಧ್ಯಕ್ಷರೆ, ಕಲಬುರ್ಗಿ ವಿಶ್ವವಿದ್ಯಾನಿಲಯವು ಆರಂಭವಾಗುವ ಮುನ್ನವೇ ಧಾರವಾಡದಲ್ಲಿ ಕುಳಿತ ಕರ್ನಾಟಕ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಇಲ್ಲಿನ ಸ್ನಾತಕೋತ್ತರ ಕೇಂದ್ರದ ಬಗ್ಗೆ ಅಸಡ್ಡೆ ಮೊದಲಿನಿಂದಲೂ ಇದ್ದ ನಿರ್ಲಕ್ಷ ಮನೋಭಾವ ಈಗ ಪರಮಾವಧಿಯನ್ನು ಮುಟ್ಟಿದೆ. ಇಲ್ಲಿನ ಸ್ನಾತ ಕೋತ್ತರ ಕೇಂದ್ರವು ಇನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಆಡಳಿತದಲ್ಲಿದೆ ಎಂಬುದನ್ನು ಅವರು ಮರೆತಂತೆ ಕಾಣಿಸುತ್ತಿದೆ. ಅಧ್ಯಕ್ಷರೆ, ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳೆ ಬದಲಾಗಿವೆ. ಇದರಿಂದ ಯಾವ ವಿಷಯ ಪ್ರಶ್ನೆ ಪತ್ರಿಕೆ ಯಾವ ಲಕೋಟೆಯಲ್ಲಿ ಸೇರಿರುತ್ತೋ ತಿಳಿಯುವುದೇ ಕಷ್ಟ. ಕನ್ನಡ ಎಂ.ಎ. ಪರೀಕ್ಷೆಯಲ್ಲಿ ''ಶಿವಯೋಗಿ ಸಿದ್ಧರಾಮ'' ಎಂಬ ಪ್ರಶ್ನೆ ಪತ್ರಿಕೆ ಒಂದೇ ಇಲ್ಲ. ಆದಕ್ಕೆ ಬದಲಾಗಿ ''ಜನಪದ ಸಾಹಿತ್ಯ'' ಎಂಬ ಪ್ರಶ್ನೆ ಪತ್ರಿಕೆ ಲಕೋಟೆಯಲ್ಲಿ ಕುಳಿತಿತ್ತು. ಇದನ್ನು ನೋಡಿದ ವಿದ್ಯಾರ್ಥಿ ಸಿದ್ಧರಾಮನ ಹಾಗೆ ಕೈಕಟ್ಟಿ ಕುಳಿತುಕೊಳ್ಳದೆ ವಿಧಿಯಿಲ್ಲ. ಅಲ್ಲಿ ಈ ರೀತಿ ಆಗಿರುವುದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಅದಕ್ಕೆ ನಾನು ಏನು ಮಾಡಬೇಕು ಅಂತ ಹೇಳಿ?

ಶ್ರೀ ಎಂ. ಗಂಗಣ್ಣ.—ಅಧ್ಯಕ್ಷರೆ, ಅಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರುವುದೇ ಒಂದು, ಪ್ರಶ್ನೆ ಪತ್ರಿಕೆ ಕೊಟ್ಟಿರುವುದೇ ಒಂದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ಪತ್ರಿಕೆಯ ವಿಷಯವನ್ನು ನಾನು ನೋಡಿಲ್ಲ. ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದನ್ನು ಸಂಬಂಧಪಟ್ಟ ಮಂತ್ರಿಗಳವರ ಹತ್ತಿರ ಮಾತನಾಡಬಹುದು. ಅವರು ಈ ಸದನದಲ್ಲಿ ಪ್ರಸ್ತಾಪ ಮಾಡಬಾರದು ಅಂತ ನಾನು ಹೇಳುತ್ತಿಲ್ಲ. ಅಧ್ಯಕ್ಷರು ಅನುಮತಿ ಕೊಟ್ಟರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದು. ಆದರ ಬಗ್ಗೆ ವಿವರಣೆ ಇಲ್ಲ. ಆದುದರಿಂದ ಮಾನ್ಯ ಸದಸ್ಯರು ಸಂಬಂಧಪಟ್ಟ ಮಂತ್ರಿಗಳವರ ಹತ್ತಿರ ಮಾತನಾಡಲಿ, ಅದು ಏನಾಗಿದೆ ನೋಡಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳೋಣ.

ANNOUNCEMENT

MR. SPEAKER.—The Business Advisory Committee which met yesterday considered the Procedure to be adopted regarding taking up of Calling Attention Notices and notices under Rule 312 in the light of the observations made in the House in that regard and have recommended that one of two notices may be included in the agenda